77 ನೇ ವರ್ಷ

# ಮೈಸೂರು ಪತ್ರಿಕೆ

MYSORE PATRIKE EVENING

ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಜಿಲ್ಲೆಗಳಲ್ಲಿ ಪ್ರಸಾರವುಳ್ಳ

ಸಂಜೆ ದಿನಪತ್ರಿಕೆ

ಸಂಸ್ಥಾಪಕರು ದಿ|| ಟಿ.ನಾರಾಯಣ

ಸಂಪಾದಕರು ಟಿ.ವಿ.ವೆಂಕಟಕೃಷ್ಣ



THE MYSORE PATRIKE Reg No.KRNN 26 PR.NO. KA/SK/MYS-92 RNI No. 3570/57 e-mail : mysorepathrike@gmail.com ಕಚೇರಿ/ಫ್ಯಾಕ್ಸ್ 4244398, 9901398398 14-7-2018 ಶನಿವಾರ ಸಂಪುಟ 77 ಸಂಚಿಕೆ 216 ಬೆಲೆ 1 ರೂ. ಪುಟ 2

# ಶಾಸಕ ಕಾರಜೋಳ ವಿರುದ್ಧ ಪ್ರತಿಭಟನೆ



ಮೈಸೂರು: ಮುಧೋಳ ವಿಧಾನಸಭಾ ಕ್ಷೇತ್ರದ ಶಾಸಕ ಗೋವಿಂದ ಕಾರಜೋಳ ರವರು ಸದನದಲ್ಲಿ ಸರ್ಕಾರ ವನ್ನು ಟೀಕಿಸುವಾಗ ವಿಕಲ ಚೇತನರನ್ನು ಅವಮಾನಿಸಿ ರುವುದನ್ನು ಖಂಡಿಸಿ ಗಾಂಧಿ ಪ್ರತಿಮೆ ಬಳಿ ಇಂದು ವಿಕಲಚೇತನರ ಅಭ್ಯುದಯ ವೇದಿಕೆ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳ ಲಾಗಿತ್ತು.

ಕಳೆದ 11ರಂದು ನಡೆದ ವಿಧಾನಸಭೆ ಅಧಿವೇಶನದಲ್ಲಿ ಶಾಸಕ ಗೋವಿಂದ ಕಾರಜೋಳ ರವರು ವಿಕಲಚೇತನರನ್ನು ಕುರಿತು ಈ ಸರ್ಕಾರ ಕುಂಟ, ಕುರುಡರಿದ್ದಂತೆ ಕುಂಟನ ಮೇಲೆ ಕುರುಡನ ಸವಾರಿ ಇವರು ಕೈಲಾಗದವರು ಎಂದು ಸರ್ಕಾರವನ್ನು ಟೀಕಿಸುವ ಬರದಲ್ಲಿ ಅವಹೇಳನ ಪದಗಳನ್ನು ಬಳಸಿ ವಿಶೇಷ ಚೇತನರನ್ನು ಅವಮಾನಿಸಿದ್ದಾರೆ.

ಅಂಗವಿಕಲರ ಅಧಿನಿಯಮ ಕಾಯ್ದೆಯನ್ನು ರಕ್ಷಿಸಿ ಸಮಾನ ಮನಸ್ಥಿತಿಯಿಂದ ಎಲ್ಲರನ್ನು ಗೌರವಿಸಬೇಕಾಗಿದ್ದ ಶಾಸಕರ ಈ ರೀತಿಯ ಪದ ಪ್ರಯೋಗಗಳು ಮಾನಸಿಕವಾಗಿ ಹಿಂಸೆ ನೀಡಿವೆ. 2106ರ ವಿಕಲಚೇತನರ ಕಾಯ್ದೆ ಸಮಾನ ಹಕ್ಕುಗಳ ಸಂರಕ್ಷಣೆ ಹಾಗೂ ಭಾಗವಹಿಸುವಿಕೆ ಉಲ್ಲಂಘನೆಯಾಗಿರುತ್ತದೆ.

ಈ ಸಂಬಂಧವಾಗಿ ಗೋವಿಂದ ಕಾರಜೋಳ ಅವರು ಅವಹೇಳನಕಾರಿ ಮಾತುಗಳನ್ನು ಖಂಡಿಸಿ ವಿಕಲಚೇತನರ ಅಭ್ಯುದಯ ವೇದಿಕೆ ಜನಸಂಗ್ರಾಮ ಪರಿಷತ್ ಹಾಗೂ ಅಂಗವಿಕಲರ ಒಕ್ಕೂಟ ವಿಶೇಷ ಚೇತನರ ಹಕ್ಕುಗಳ ಉಳಿವಿಗಾಗಿ ಪ್ರತಿಭಟನೆ ನಡೆಸಿದರು.

## 17ರಂದು ಕುಂದು ಕೊರತೆ ಸಭೆ



ಮೈಸೂರು: ಉನ್ನತ ಶಿಕ್ಷಣ ಸಚಿವ ಜಿ.ಟಿ.ದೇವೇಗೌಡರು ಜು.17ರಂದು ಬೆಳಿಗ್ಗೆ 10.30ಕ್ಕೆ ಸಾರ್ವಜನಿಕರ ಕುಂದು ಕೊರತೆ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿ ಕಾರ್ಯದ ಬಗ್ಗೆ ಸಭೆ ಕರೆದಿದ್ದಾರೆ.

## ವಿದ್ಯುತ್ ನಿಲುಗಡೆ

ಮೈಸೂರು: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವತಿಯಿಂದ 66/11 ಕೆವಿ ತಾಯೂರು ವಿದ್ಯುತ್ ವಿತರಣಾ ಕೇಂದ್ರದ ವತಿಯಿಂದ 4ನೇ ಟವರ್‌ನಿಂದ 8ನೇ ಟವರ್ ನ ವರೆಗೆ ವಾಹಕ ಬದಲಾವಣೆ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದೆ.

ಜು.17 ರಂದು ಬೆಳಿಗ್ಗೆ 8 ರಿಂದ ಸಂಜೆ 6 ಗಂಟೆಯವರೆಗೆ ತಾಯೂರು, ಈಶ್ವರಗೌಡನಹಳ್ಳಿ, ವಡ್ಡರಹುಂಡಿ, ಬೀರಿಹುಂಡಿ, ಕೊಟ್ಟರಾಯನಹುಂಡಿ, ಗೆಜ್ಜಗನ ಹಳ್ಳಿ, ಕಾಹಳ್ಳಿ ಮತ್ತು ಕಲ್ಕುಂದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆಯಾಗಲಿದೆ ಸಾರ್ವಜನಿಕರು ಸಹಕರಿಸಬೇಕಾಗಿ ಕೋರಿದೆ.

## ದರಪಟ್ಟಿ ಆಹ್ವಾನ

ಮೈಸೂರು: ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಸದಸ್ಯ ಕಾರ್ಯದರ್ಶಿಗಳಾದ ಸಹಾಯಕ ಕಾರ್ಮಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು. ಅಕ್ಷಯ ಭಂಡಾರ ವೃತ್ತ. ಕುವೆಂಪುನಗರ ಮೈಸೂರು. ಕಛೇರಿಗೆ ವೀಡಿಯೋ ಕಾನ್ಫರೆನ್ಸ್ ಸಿಸ್ಟಮ್ ಅಳವಡಿಸಲು ಹಾಗೂ ಹೆಚ್.ಡಿ. ಕೋಟೆ ತಾಲ್ಲೂಕಿನ ಬಾಲಕಾರ್ಮಿಕ ತರಬೇತಿ ಕೇಂದ್ರದಲ್ಲಿ ಆಧಾರ್ ಕಾರ್ಡ್ ಆಧಾರಿತ ಬಯೋಮೆಟ್ರಿಕ್ ಸಿಸ್ಟಮ್ ಅಳವಡಿಸುವ ಸಲುವಾಗಿ ಸ್ಥಳೀಯ ವಾಣಿಜ್ಯ ಸಂಸ್ಥೆಗಳಿಂದ ದರ ಪಟ್ಟಿಯನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ದೂರವಾಣಿ 0821-2541942, 8618043356ನ್ನು ಸಂಪರ್ಕಿಸಿ.

## ಮುಖ್ಯಮಂತ್ರಿ ಮನವಿ

ಬೆಂಗಳೂರು :ಕಾವೇರಿ ಹೇಮಾವತಿ ಹಾರಂಗಿ ಜಲಾನಯನ ಪ್ರದೇಶದಲ್ಲಿ



ಮಳೆ ಬೀಳುತ್ತಿರುವುದು ಗಣನೀಯವಾಗಿ ಹೆಚ್ಚಾಗುತ್ತಿರುವುದರಿಂದ ಜಲಾಶಯದಲ್ಲಿ ನೀರಿನ ಮಟ್ಟ ಹೆಚ್ಚುತ್ತಿರುವುದರಿಂದ ನದಿ ತೀರದಲ್ಲಿ ವಾಸಿಸುವ ಜನರನ್ನು ಬೇರೆ ಕಡೆ ಸ್ಥಳಾಂತರಿಸುವಂತೆ ರಾಜ್ಯದ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದ್ದಾರೆ.

## ಗುರುವಂದನಾ ಕಾರ್ಯಕ್ರಮ



ಮೈಸೂರು: ಜು. 27ರಂದು ಶ್ರೀ ಗುರುಪೂರ್ಣಿಮಾ ಮಹೋತ್ಸವ ಹಿನ್ನೆಲೆ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದಲ್ಲಿ ಗುರುವಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಮೈಸೂರು ಶಾಖಾ ಮಠದ ಶಿವಾನಂದಪುರಿ ಸ್ವಾಮೀಜಿ ತಿಳಿಸಿದರು.

ಕಾಗಿನೆಲೆ ಮೈಸೂರು ಶಾಖಾ ಮಠದಲ್ಲಿ ಇಂದು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರೇವಣ ಸಿದ್ದೇಶ್ವರ ಮಹಸಂಸ್ಥಾನದ ನಿರಂಜನಾನಂದಪುರಿ ಮಹಾಸ್ವಾಮಿಗಳಿಗೆ ಗುರುವಂದನೆ ನಡೆಸಲಿದ್ದು, ಈ ಬಾರಿ ಮೈಸೂರು ಶಾಖಾ ಮಠದಿಂದ ಗುರುಪೂರ್ಣಿಮಾ ಮಹೋತ್ಸವ ನಡೆಯಲಿದೆ. ಮೈಸೂರಿನಿಂದ ಸುಮಾರು 10 ಸಾವಿರ ಭಕ್ತಾದಿಗಳು ಹೊರಡುವ ನಿರೀಕ್ಷೆಯಿದ್ದು, ಬರುವ ಭಕ್ತಾದಿಗಳಿಗೆ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

## ಲಸಿಕಾ ಅಭಿಯಾನ ಕಾರ್ಯಕ್ರಮ

ಮೈಸೂರು: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಮಿಷನ್ ಇಂದ್ರಧನುಷ್ ಅಭಿಯಾನ ಕಾರ್ಯಕ್ರಮದಡಿ ರಕ್ಷಣಾ ಚುಚ್ಚುಮದ್ದುನಿಂದ ಭಾಗಶಃ ಅಥವಾ ಪೂರ್ಣ ಪ್ರಮಾಣದಲ್ಲಿ ವಂಚಿತರಾದ ಗರ್ಭಿಣಿಯರು, 0-2 ವರ್ಷದ ಮಕ್ಕಳು ಹಾಗೂ 5-6 ವರ್ಷದ ಮಕ್ಕಳನ್ನು ಗುರುತಿಸಿ ಸಂಪೂರ್ಣ ರಕ್ಷಣ ಲಸಿಕೆ ನೀಡಲಾಗುವುದು.

2018-19ನೇ ಸಾಲಿನಲ್ಲಿ ಮಿಷನ್ ಇಂದ್ರಧನುಷ್ ?ನಗರ ಲಸಿಕಾ ಅಭಿಯಾನ? ಕಾರ್ಯಕ್ರಮವನ್ನು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂರು ಸುತ್ತಿನಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಈ ಸದರಿ ಕಾರ್ಯಕ್ರಮದಲ್ಲಿ ವಿಶೇಷ ಶಿಬಿರಗಳ ಮೂಲಕ ಪೂರ್ಣ ಮತ್ತು ಸಂಪೂರ್ಣ ರಕ್ಷಣಾ ಲಸಿಕೆಯನ್ನು ನೀಡುವ ಭಾರತ ಸರ್ಕಾರದ ಮಹತ್ತರ ಯೋಜನೆ ಇದಾಗಿರುತ್ತದೆ. ಈ ಯೋಜನೆಯು ಜುಲೈ-2018 ರಿಂದ ಸಪ್ಟೆಂಬರ್-2018 ರ ವರೆವಿಗೆ 3 ತಿಂಗಳ ಕಾಲಾವಧಿಯಲ್ಲಿ ಅನುಷ್ಠಾನಗೊಳ್ಳುತ್ತಿದೆ.

ಮೊದಲನೇ ಸುತ್ತಿನ ಮಿಷನ್ ಇಂದ್ರಧನುಷನ್ ?ನಗರ ಲಸಿಕಾ ಅಭಿಯಾನ? ಕಾರ್ಯಕ್ರಮವು ಮೈಸೂರು ನಗರ ವ್ಯಾಪ್ತಿಯಲ್ಲಿರುವ 65 ವಾರ್ಡಗಳಲ್ಲಿ ಸಮೀಕ್ಷಾ ಕಾರ್ಯವನ್ನು ಕೈಗೊಂಡು, 0-2 ವರ್ಷದ 3842 ಮಕ್ಕಳನ್ನು ಹಾಗೂ 5-6 ವರ್ಷದ 1774 ಮಕ್ಕಳನ್ನು ಗುರುತ್ತಿಸಲಾಗಿದ್ದು, ಮತ್ತು 1122 ಜನ ಗರ್ಭಿಣಿ ಮಹಿಳೆಯರನ್ನು ಸದರಿ ಕಾರ್ಯಕ್ರಮದಲ್ಲಿ ಫಲಾನುಭವಿಗಳಾಗಿ ಗುರುತ್ತಿಸಿ 139 ವಿಶೇಷ ಲಸಿಕಾ ಕೇಂದ್ರಗಳ ಮೂಲಕ ರಕ್ಷಣಾತ್ಮಕ ಲಸಿಕೆಯನ್ನು ನೀಡಲಾಗುತ್ತದೆ. ಮೊದಲನೆ ಸುತ್ತನ್ನು ದಿನಾಂಕ: 16-07-2018 ರಿಂದ 20-07-2018 ವರಗೆ ಹಮ್ಮಿ ಕೊಳ್ಳಲಾಗಿದೆ. ಈ ಕಾರ್ಯಕ್ರಮದ ಉಪಯೋಗವನ್ನು ಸಾರ್ವಜನಿಕರು ಪಡೆದು ಕೊಳ್ಳುವಂತೆ ಕೋರಿದೆ.



ಪ್ಲಾಸ್ಟಿಕ್ ಸರ್ಜರಿ ಡೇ 2018ರ ಸಂದರ್ಭದಲ್ಲಿ ಮೈಸೂರಿನ ಅಪೊಲೋ ಬಿಜಿಎಸ್ ಆಸ್ಪತ್ರೆ ಗಾಯ ಕ್ಲಿನಿಕ್ ಅನ್ನು ಪ್ರಾರಂಭಸುತ್ತಿದ್ದು, ಮೈಸೂರು ನಗರದಲ್ಲೇ ಸುಮಾರು 4,500 ಜನರಿಗೆ 3 ತಿಂಗಳ ನಂತರವೂ ಗಾಯಗಳು ವಾಸಿಯಾಗದೆ ಇರುವುದೆಂದು ಅಂದಾಜಿಸಲಾಗಿದೆ. ಈ ಅಂಕಿ ಅಂಶದಿಂದ ಪ್ರತಿ ವರ್ಷವೂ ಮೈಸೂರು ಜಿಲ್ಲೆಯ ಸುಮಾರು 15,000 ಜನರು ಈ ಸಮಸ್ಯೆಯಿಂದ ಬಳಲುತ್ತಿರುವುದಾಗಿ ಕಂಡು ಬರುತ್ತದೆ ಎಂದು ಅಪೊಲೀ ಆಸ್ಪತ್ರೆಯ ಡಾ. ಸತೀಶ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

## ರಾಮಂದಿರ ಕಾಮಗಾರಿ ಆರಂಭ



ಅಹ್ಮದಾಬಾದ್ : ಮುಂಬರುವ ಲೋಕಸಭೆ ಚುನಾವಣೆಯ ಮುನ್ನ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಕಾಮಗಾರಿ ಆರಂಭಿಸಲಾಗುವುದು ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ತಿಳಿಸಿದ್ದಾರೆ.

## ಗೌರಿ ಹತ್ಯೆ ಪ್ರಕರಣ: ಬಂಧಿತ ಅಮಾಯಕರ ಬಿಡುಗಡೆಗೆ ಆಗ್ರಹ

ಮೈಸೂರು: ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಅಮಾಯಕರಿಗೆ ಹಿಂಸೆ ನೀಡುತ್ತಿರುವುದನ್ನು ಖಂಡಿಸಿ ಪ್ರತಿಭಟನೆ ರಾಷ್ಟ್ರೀಯ ಹಿಂದೂ ಆಂದೋಲನದ ವತಿಯಿಂದ ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಪ್ರತಿಭಟನೆ ನಡೆಸಿದರು.

ವಿಶೇಷ ತನಿಖಾದಳದ ಹೆಸರಲ್ಲಿ ಪೊಲೀಸರು ಹಿಂದೂ ಯುವಕರಿಗೆ ಚಿತ್ರಹಿಂಸೆ ನೀಡುತ್ತಿರುವುದು ಖಂಡನೀಯ. ರಾಜಕೀಯ ಲಾಭ ಪಡೆಯಲು ಕಾಣದ ಶಕ್ತಿಗಳು ಈ ರೀತಿಯ ಕೆಲಸ ಮಾಡುತ್ತಿವೆ. ತನಿಖೆ ಹೆಸರಿನಲ್ಲಿ ಅಮಾಯಕ ಯುವಕರನ್ನು ಬಂಧಿಸಲಾಗುತ್ತಿದೆ. ಹಿಂದೂ ಸಂಘಟನೆ ಕಾರ್ಯಕರ್ತರ ಹತ್ಯೆಯಾದಾಗ ವಿಶೇಷ ತನಿಖಾ ದಳ ರಚಿಸದ ಸರ್ಕಾರ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆಯ ಹಂತಕರನ್ನು ಬಂಧಿಸಲು ವಿಶೇಷ ತನಿಖಾ ದಳ ರಚಿಸಿದೆ. ಈ ಕೂಡಲೇ ಹಿಂದೂ ಕಾರ್ಯಕರ್ತರ ಹಂತಕರನ್ನು ಬಂಧಿಸಬೇಕು ಹಾಗೂ ಗೌರಿ ಹಂತಕರೆಂದು ಬಂಧಿಸಿರುವ ಅಮಾಯಕ ಯುವಕರನ್ನು ಬಿಡುಗಡೆಗೊಳಿಸಬೇಕೆಂದು ಆಗ್ರಹಿಸಿದರು.



ಕರ್ನಾಟಕ ಚಿಂತನಾ ವೇದಿಕೆ ವತಿಯಿಂದ ಸಂವಿಧಾನ ಮತ್ತು ಜಾತ್ಯಾತೀತತೆಯನ್ನು ರಕ್ಷಿಸುವಲ್ಲಿ ಸಮ್ಮಿಶ್ರ ಸರ್ಕಾರದ ಸವಾಲುಗಳ ಕುರಿತ ವಿಚಾರಗೋಷ್ಠಿಯನ್ನು ನಗರದ ಮಾನಸಗಂಗೋತ್ರಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಂಡ್ಯ ಜಿಲ್ಲೆಯ ಕಿಕ್ಕೇರಿ ತಾಲ್ಲೂಕಿನ ಕೆ.ಜೆ. ನಾರಾಯಣ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

## 16, 17 ರಂದು ದೂರು ಸ್ವೀಕಾರ

ಮೈಸೂರು: ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸ ನಿರ್ವಹಿಸುವಲ್ಲಿ ಅಧಿಕೃತ ವಿಳಂಬ, ಲಂಚಕ್ಕಾಗಿ ಒತ್ತಾಯ ಹಾಗೂ ಇನ್ನಿತರ ರೀತಿಯಲ್ಲಿ ತೊಂದರೆ ನೀಡುತ್ತಿರುವ ಅಧಿಕಾರಿ ನೌಕರರ ವಿರುದ್ಧ ಮೈಸೂರು ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಉಪಾಧೀಕ್ಷಕರು ಜು. 16ರಂದು ಬೆಳಿಗ್ಗೆ 11 ಗಂಟೆಗೆ ಟಿ. ನರಸೀಪುರ ಪರಿವೀಕ್ಷಣಾ ಮಂದಿರದಲ್ಲಿ ಹಾಗೂ ಮಧ್ಯಾಹ್ನ 3.30ಕ್ಕೆ ನಂಜನಗೂಡಿನ ಪರಿವೀಕ್ಷಣಾ ಮಂದಿರದಲ್ಲಿ, ಜು. 17 ರಂದು ಬೆಳಿಗ್ಗೆ 11 ಗಂಟೆಗೆ ಹುಣಸೂರು ಪರಿವೀಕ್ಷಣಾ ಮಂದಿರ ಹಾಗೂ ಮಧ್ಯಾಹ್ನ 3.30ಕ್ಕೆ ಪಿರಿಯಾಪಟ್ಟಣ ಪರಿವೀಕ್ಷಣಾ ಮಂದಿರದಲ್ಲಿ ಸಾರ್ವಜನಿಕರಲ್ಲಿ ಭ್ರಷ್ಟಾಚಾರದ ಬಗ್ಗೆ ಅರಿವು ಮೂಡಿಸುವ ಮತ್ತು ದೂರನ್ನು ಸ್ವೀಕರಿಸುವ ಕಾರ್ಯಕ್ರಮ ನಡೆಯಲಿದೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಮೈಸೂರು ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಓದುವ ಸಂಸ್ಕೃತಿ ಬೆಳೆಸಿಕೊಳ್ಳಿ

ಮೈಸೂರು: ಸಿಕ್ಕ ಸಮಯವನ್ನು ವ್ಯರ್ಥ ಮಾಡದೆ ಓದುವ ಸಂಸ್ಕೃತಿಯನ್ನು ಬೆಳೆಸಿ ಕೊಳ್ಳಬೇಕು ಎಂದು ಹಿರಿಯ ರಂಗಕರ್ಮಿ ಡಾ.ಹೆಚ್.ಕೆ. ರಾಮನಾಥ್ ತಿಳಿಸಿದರು.

ಕುಕ್ಕರಹಳ್ಳಿಕೆರೆ ಸರ್ಕಾರಿ ಪ್ರೌಢಶಾಲೆಯಲ್ಲಿ ಇಂದು ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸಾರ್ವಜನಿಕ ಗ್ರಂಥಾಲಯ ವತಿಯಿಂದ ಕಲಿ-ಕಲಿಸು ಸಹಯೋಗದಲ್ಲಿ ನಡೆದ ಮರಳಿ ಗ್ರಂಥಾಲಯಕ್ಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಈ ತರಹದ ಕಾರ್ಯಕ್ರಮವನ್ನು ಮೊತ್ತ ಮೊದಲು ನೋಡುತ್ತಿರುವುದೇ ಇವತ್ತು. ತುಂಬಾ ಸಂತೋಷವಾಗುತ್ತಿದೆ. ಮಕ್ಕಳು ಓದುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು. ಓದುವ ಸಂಸ್ಕೃತಿ ಬಿಟ್ಟು ಹೋಗಿರುವ ಈ ಸಂದರ್ಭದಲ್ಲಿ ಮರಳಿ ಗ್ರಂಥಾಲಯಕ್ಕೆ ಕಾರ್ಯಕ್ರಮ ನಡೆಸುತ್ತಿರುವುದು ಶ್ಲಾಘನೀಯ ಎಂದರು.

ಓದಿನ ಜೊತೆಗೆ ಬೇರೆ ಬೇರೆ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಸಂಗೀತ, ಸಾಹಿತ್ಯ, ನಾಟಕ, ಯೋಗ ಹೀಗೆ ಯಾವುದರಲ್ಲಾದರೂ ತೊಡಗಿಸಿಕೊಳ್ಳಬೇಕು. ಅವುಗಳಲ್ಲಿ ಪರಿಣಿತಿ ಪಡೆಯಬೇಕು. ಹಾಗಿದ್ದಾಗ ಮಾತ್ರ ಬೆಳೆಯೋದಕ್ಕೆ ಸಾಧ್ಯ. ವ್ಯರ್ಥವಾಗಿ ಸಮಯವನ್ನು ಹಾಳು ಮಾಡುತ್ತಿದ್ದೇವೆ. ರೈಲಿನಲ್ಲಿ ಹೋಗುವಾಗ ಕಾಲ ಕಳೆಯಲು ನಮ್ಮ ಜೊತೆ ಯಾವುದಾದರೂ ಗ್ರಂಥ ಕೊಂಡೊಯ್ಯಿರಿ ಎಂದು ಸಲಹೆ ನೀಡಿದರು. ಡಾ.ಬಿ.ಆರ್. ಅಂಬೇಡ್ಕರ್ ಅವರು ದಿನಕ್ಕೆ 40 ಪುಟವನ್ನಾದರೂ ಓದುತ್ತಿದ್ದರಂತೆ. ಆದರೆ ನಾವು ನಾಲ್ಕು ಪುಟವನ್ನೂ ಓದಲ್ಲ. ನನಗೆ ಅದೃಷ್ಟವಿಲ್ಲ ಎಂದು ಭಾವಿಸಬೇಡಿ, ಅದೃಷ್ಟಕ್ಕೆ ಬೆಲೆಕೊಡಬೇಡಿ, ಪ್ರಯತ್ನಕ್ಕೆ ಬೆಲೆಕೊಡಿ ಎಂದು ಅಂಬೇಡ್ಕರ್ ಹೇಳಿದ್ದರು. ಅದನ್ನು ನೀವೂ ಕೂಡ ಪಾಲಿಸಿ ಎಂದರು.

ನಗರ ಕೇಂದ್ರ ಗ್ರಂಥಾಲಯದ ಗ್ರಂಥಪಾಲಕಿ ಪಾರ್ವತಿ ಮಾತನಾಡಿ ಗ್ರಂಥಾಲಯ ವಿದ್ಯಾರ್ಥಿಗಳನ್ನು ಆಕರ್ಷಿಸುವ ಸ್ಥಳ. ಜ್ಞಾನ ದೇಗುಲ. ಸರಸ್ವತಿಮಾತೆಯ ಆಲಯ. ಇದು ಸಮುದ್ರವಾಗಿದ್ದು, ಇಲ್ಲಿಂದ ಒಂದು ತೊಟ್ಟು ನೀರು ತೆಗೆದರೆ ಖಾಲಿಯಾಗಲ್ಲ. ಮಕ್ಕಳು ಅಂಕ ಗಳಿಸುವ ಯಂತ್ರವಾಗುತ್ತಿದ್ದಾರೆ. ಪಠ್ಯಪುಸ್ತಕದ ಹುಳುವಾಗುತ್ತಿದ್ದಾರೆ. ಆದರೆ ಪಠ್ಯೇತರ ಪುಸ್ತಕಗಳನ್ನೂ ಓದಿ ಜ್ಞಾನವನ್ನು ವೃದ್ಧಿಸಿಕೊಳ್ಳಿ ಎಂದು ತಿಳಿಸಿದರು. ಜ್ಞಾನವನ್ನು ಯಾರೂ ಕಳ್ಳತನ ಮಾಡಲು ಸಾಧ್ಯವಿಲ್ಲ. ನಾವು ಗಳಿಸಿದ ಜ್ಞಾನ ಸದಾ ನಮ್ಮ ಜೊತೆಗೇ ಇರುತ್ತದೆ ಎಂದು ತಿಳಿಸಿದರು.



ಸುದರ್ಶನ ನಾರಸಿಂಹ ಕ್ಷೇತ್ರ



ಶ್ರೀ ಯೋಗಾನರಸಿಂಹಸ್ವಾಮಿ ಸೇವಾ ಸಮಿತಿ (ರಿ.)

ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ

ವಿಜಯನಗರ 1ನೇ ಹಂತ, ಮೈಸೂರು - 570017

ಪ್ರತಿ ಮಾಸ ಶ್ರೀನಿವಾಸ ಕಲ್ಯಾಣ ಹಾಗೂ ಅಮಾವಾಸ್ಯೆ ದಿನದಂದು

ವಿಶೇಷ ಪೂಜೆ ಇರುತ್ತದೆ.

ಭಕ್ತಾದಿಗಳು ಬಂದು ಭಾಗವಹಿಸಲು ಕೋರಲಾಗಿದೆ.



ಡಾ. ಶ್ರೀ ಭಾಷ್ಯಂ ಸ್ವಾಮೀಜಿ
ಸಂಸ್ಥಾಪಕರು